## ಅಜ್ಜೀ ಏಕಾದಶಿ

ಅಕ್ಕನ ಮೊಮ್ಮಗಳು ಆರು ವರ್ಷದ ಶಾರ್ವರಿ ರಜೆಯಲ್ಲಿ ನಮ್ಮ ಮನೆಗೆ ಬಂದಿದ್ದಳು. ನನ್ನ ಜೊತೆ ಪಾತ್ರೆ ತೊಳೆಯುವುದು, ಬಟ್ಟೆ ಮಡಚುವುದು, ಕಸ ಗುಡಿಸುವುದು, ದೇವರ ಪೂಜೆ... ಹೀಗೆ ನಾನು ಏನೇ ಕೆಲಸ ಮಾಡಿದರೂ ಜೊತೆಗೆ ಅವಳೂ ಸೇರಿಕೊಳ್ಳುತ್ತಿದ್ದಳು. ಅಂದು ಏಕಾದಶಿ ಇತ್ತು. ಅವಳಿಗೆ ದೋಸೆ ಮಾಡಿಕೊಟ್ಟೆ. ಅವಳು, 'ಅಜ್ಜಿ, ನೀವೇಕೆ ದೋಸೆ ತಿನ್ನಲಿಲ್ಲ?' ಎಂದು ಕೇಳಿದಳು. 'ಇವತ್ತು ನನಗೆ ಏಕಾದಶಿ ಪುಟ್ಟಾ. ನಾನು ಆಮೇಲೆ ತಿನ್ನುತ್ತೇನೆ' ಎಂದೆ. ಮಧ್ಯಾಹ್ನ ಫೋನ್‌ನಲ್ಲಿ ಅವರಮ್ಮನ ಜೊತೆ ಮಾತಾನಾಡುತ್ತಾ, 'ಇವತ್ತು ಶಶಿಯಜ್ಜಿ ಏಕಾದಶಿ ಮಾಡಿಕೊಂಡು ತಿಂದ್ರು. ನನಗೆ ಕೊಡಲಿಲ್ಲ' ಅಂದಳು. ಅವರಮ್ಮ ತಮಾಷೆ ಮಾಡುತ್ತಾ, 'ಅಜ್ಜಿ ಹತ್ರ ನೀನೂ ಏಕಾದಶಿ ಮಾಡಿಸಿಕೊಂಡು ತಿನ್ನು' ಎಂದಳು. ಇವಳು ಫೋನ್ ಇಟ್ಟಿದ್ದೇ ತಡ ನನ್ನ ಅಡುಗೆ ಮನೆಗೆ ಕರಕೊಂಡು ಬಂದು, 'ಅಜ್ಜಿ, ಈಗ ನನಗೂ ಏಕಾದಶಿ ಮಾಡಿಕೊಡು' ಎಂದು ಒಂದೆ ಸಮನೆ ಹಟ ಹಿಡಿದಳು.




ಅವಳನ್ನ ಸಮಾಧಾನ ಮಾಡುವಷ್ಟರಲ್ಲಿ ನನಗೆ ಸಾಕಾಯಿತು. ಅಕ್ಕನ ಮಗಳು ಈಗಲೂ ಫೋನ್ ಮಾಡಿದಾಗಲೆಲ್ಲಾ 'ಎಷ್ಟು ಏಕಾದಶಿ ತಿಂದೆ?' ಎಂದು ತಮಾಷೆ ಮಾಡುತ್ತಾಳೆ.

**ಶಶಿರೇಖಾ ನಾಗೇಂದ್ರ**

---

## ಸಮಾನಾರ್ಥಕ ಪದ

ಹೆಸರಾಂತ ಕಾನ್ವೆಂಟ್ ಶಾಲೆಯ ಮಕ್ಕಳಿಗೆ ಆನ್‌ಲೈನ್‌ನಲ್ಲಿ ಕನ್ನಡ ಪಾಠ ನಡೆದಿತ್ತು. ಹಿಂದಿನ



ದಿನವೇ ಎಲ್ಲಾ ಮಕ್ಕಳಿಗೆ ಕೆಲವು ಸಮಾನಾರ್ಥಕ ಪದಗಳನ್ನು ಹೇಳಿಕೊಟ್ಟಿದ್ದೆ. ಮರುದಿನ ಅವರ ನೆನಪಿನ ಶಕ್ತಿಯನ್ನು ಪರೀಕ್ಷಿಸಲು ಹೊಸ ಪದಗಳಿಗೆ ಸಮಾನಾರ್ಥಕ ಪದಗಳನ್ನು ಕೇಳುತ್ತಿದ್ದೆ. ಒಂದು ಮನೆಯಲ್ಲಿ ಬೋನಿತಾ, ಬಿಯಾಂಕ ಎನ್ನುವ ಅವಳಿ ಮಕ್ಕಳು ಒಂದೇ ಕ್ಲಾಸಿನಲ್ಲಿ ಇದ್ದರು. ಮೊದಲು ಬಿಯಾಂಕಳನ್ನು 'ಹೂವು' ಎನ್ನುವ ಪದಕ್ಕೆ ಸಮನಾರ್ಥಕ ಪದ ಹೇಳಲು ಕೇಳಿದೆ. ಅವಳು 'ಸುಮ' ಎಂದು ಸರಿಯಾಗಿ ಉತ್ತರಿಸಿದಳು. ಅದರಂತೆ ಬೋನಿತಾಳಿಗೆ 'ಕತ್ತೆ'ಗೆ ಸಮಾನಾರ್ಥಕ ಪದ ಕೇಳಿದೆ. ಆಕೆ, ತಕ್ಷಣವೇ 'ಬಿಯಾಂಕ' ಎಂದು ಉತ್ತರಿಸಿದಳು. ನನಗಂತೂ ನಗು ತಡೆಯಲಾಗಲಿಲ್ಲ. ಅಕ್ಕ–ತಂಗಿಯರ ನಡುವೆ ಸ್ವಲ್ಪ ಹೊತ್ತಿಗೆ ಮುಂಚೆ ಜಗಳವಾಗಿತ್ತು. ಅದನ್ನು ಹೇಳಿ ಬಿಯಾಂಕಳೂ ಸಹ ನಗುವಿನಲ್ಲಿ ಭಾಗಿಯಾದಳು.

**ವಿದ್ಯಾ ವಿ. ಹಾಲಭಾವಿ**